**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ30-06-2026**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಐ ಇ ಪಿ ವಕೀಲರಿಂದಃ**

ನನ್ನ ಅಜ್ಜನ ಹೆಸರು ಸುಬ್ಬೇಗೌಡ. ಅಜ್ಜಿಯ ಹೆಸರು ಕಾಳಮ್ಮ. ಸುಬ್ಬೇಗೌಡರಿಗೆ ಇಬ್ಬರು ಹೆಂಡತಿಯರು. ಅವರ ಮೊದಲನೇ ಹೆಂಡತಿ ಖಾಯಿಲೆಯಿಂದ ತೀರಿಕೊಂಡಿದ್ದು, ಅವರಿಗೆ ಯಾವುದೇ ಮಕ್ಕಳು ಇರುವುದಿಲ್ಲ. ಸುಬ್ಬೇಗೌಡ ಮತ್ತು ಕಾಳಮ್ಮ ರವರಿಗೆ ಒಟ್ಟು 6 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು, ಅವರ ಹೆಸರು ಕೃಷ್ಣೇಗೌಡ, ಬೈರೇಗೌಡ, ಲಕ್ಷ್ಮೆಗೌಡ, ಹುಚ್ಚೇಗೌಡ, ದೇವೇಗೌಡ, ಲೋಕೇಶ್ವರ್, ಅನುಸೂಯಮ್ಮ, ಸೀತಮ್ಮ, ಶೇಷಮ್ಮ. ಸುಬ್ಬೇಗೌಡರು ಮತ್ತು ಅವರ ಮಕ್ಕಳು ಎಷ್ಟನೇ ಇಸವಿವರೆಗೂ ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ಸುಬ್ಬೇಗೌಡರು ಮತ್ತು ಅವರ ಮಕ್ಕಳು ತಮ್ಮ ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸುಬ್ಬೇಗೌಡರು ಮತ್ತು ಅವರ ಮಕ್ಕಳಿಗೆ ಹೆಚ್ಚಿನ ವಿಧ್ಯಾಭ್ಯಾಸ ಇರಲಿಲ್ಲ. ಆದರೆ ಅವರಲ್ಲಿ ಲೋಕೇಶ್ವರ್ ರವರು ಮಾತ್ರ ಪದವಿ ಮಾಡಿದ್ದರು. ಕೃಷ್ಣೇಗೌಡ ಮತ್ತು ಅವರ ಸಹೋದರ ಮತ್ತು ಸಹೋದರಿಯರ ನಡುವೆ ಯಾವ ವರ್ಷದಲ್ಲಿ ವಿಭಾಗವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿಃ 05.09.1972 ರಲ್ಲಿ ಕೃಷ್ಣೇಗೌಡ ಮತ್ತು ಅವರ ಸಹೋದರ ಸಹೋದರಿಯ ನಡುವೆ ವಿಭಾಗವಾಗಿರುವ ವಿಚಾರ ನನಗೆ ಗೊತ್ತಿದೆ. ಸದರಿ ವಿಭಾಗ ಪತ್ರದಲ್ಲಿ ದಾವಾ ಆಸ್ತಿ ಸೇರಿರುವುದಿಲ್ಲ. ವಿಭಾಗ ಪತ್ರದಲ್ಲಿದ್ದಂತಹ ಪಕ್ಷಕಾರರನ್ನು ಈ ದಾವೆಯಲ್ಲಿ ಪಕ್ಷಕಾರನ್ನಾಗಿ ಮಾಡಲು ನಿಮಗೆ ತೊಂದರೆ ಇದೆಯೇ ಎಂದರೆ ಸಾಕ್ಷಿದಾರರು ಅವರಿಗೆ ಈ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲದೇ ಇರುವುದರಿಂದ ಅವರನ್ನು ಪಕ್ಷಕಾರನ್ನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿರುವುದರಿಂದ ಅವರನ್ನು ಪಕ್ಷಕಾರನ್ನಾಗಿ ಮಾಡಬೇಕಿತ್ತು ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪೂಃ ರಸ್ತೆ. ಪಃ ಕೆರೆ, ಉಃ ಪಾರ್ಕ್, ದಃ ಪುಟ್ಟೇಗೌಡರ ಮನೆ ಇದೆ. ದಾವಾ ಆಸ್ತಿ ಪೂ.ಪ 76 ಅಡಿ ಉ.ದ 165 ಅಡಿ ಇರುತ್ತದೆ. ದಾವಾ ಆಸ್ತಿಯ 12,540 ಅಡಿ ನನ್ನ ತಂದೆ ಹೆಸರಿನಲ್ಲಿದ್ದು 1972 ರಲ್ಲಿ ವಿಭಾಗವಾಗುವಾಗ ಅದರಲ್ಲಿ 70*60 ಜಾಗವನ್ನು ಲೋಕೇಶ್ ರವರ ಹೆಸರಿಗೆ ನೀಡಿರುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆ ಬಲವಂತಪ್ಪ ಎನ್ನುವವರಿಂದ 1961-62 ರಲ್ಲಿ ಖರೀದಿ ಮಾಡಿರುತ್ತಾರೆ. ಸರ್ವೆ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಅದರ ಸರ್ವೆ ನಂ.194 ಆಗಿತ್ತು. ಸದರಿ ಸ್ವತ್ತನ್ನು ಕೃಷಿಯೇತರ ಉದ್ದೇಶಕ್ಕಾಗಿ ವರ್ಗಾವಣೆ ಆದೇಶವನ್ನು ನನ್ನ ತಂದೆ ಪಡೆದುಕೊಂಡಿರುವುದಿಲ್ಲ. ನನ್ನ ಹೆಸರಿನಲ್ಲಿ 12540 ಅಡಿ ಜಾಗ ಸರ್ವೆ ನಂ 194 ರಲ್ಲಿ ಇತ್ತು ಎನ್ನುವ ಬಗ್ಗೆ ಖಾತಾ

ಎಕ್ಸಟ್ರಾಕ್ ನ್ನು ಹಾಜರುಪಡಿಸಿರುವುದಿಲ್ಲ. ಲೋಕೇಶ್ ರವರಿಗೆ ನೀಡಿ 70*60 ಅಡಿ ಜಾಗದ ಪೂ. ರಸ್ತೆ, ಪಃ ನನ್ನ ತಂದೆಯ ಜಾಗ, ಉಃ ಓಣಿ, ದಃ ಪುಟ್ಟೇಗೌಡರ ಮನೆ. ಸದರಿ ಚೆಕ್ಕುಬಂಧಿಯನ್ನು ವಿಭಾಗ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ.

ವಿಭಾಗ ಪತ್ರದಲ್ಲಿ ಲೋಕೇಶ್ ರವರ ಹೆಸರಿಗೆ ಸಂಪೂರ್ಣ 12540 ಚದುರ ಅಡಿ ಜಾಗದ ಚೆಕ್ಕುಬಂದಿಯನ್ನು ತೋರಿಸಿ ಹಿಸ್ಸೆ ನೀಡಲಾಗಿದೆ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ಲೋಕೇಶ್ ರವರಿಗೆ ನೀಡಿದ ಸ್ವತ್ತನ್ನು ಹೊರತು ಪಡಿಸಿ ಉಳಿದ ಭಾಗ ನನ್ನ ತಂದೆ ಸೇರುತ್ತದೆ ಎನ್ನುವ ಬಗ್ಗೆ ಬರೆಸಿರುವುದಿಲ್ಲ. ವಿಭಾಗ ಪತ್ರದಲ್ಲಿ ಎ ಷಡ್ಯೂಲ್ ಸ್ವತ್ತು ನನ್ನ ತಂದೆಗೆ ಬಂದಿರುತ್ತದೆ ಎಂದರೆ ಸರಿ. ಎ ಷಡ್ಯೂಲ್ ಸ್ವತ್ತಿನಲ್ಲಿ ದಾವಾ ಆಸ್ತಿ ನಮೂದಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದ್ದ ಕಾರಣ ಅದನ್ನು ವಿಭಾಗ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಿಭಾಗ ಪತ್ರದ ನಂತರ ನನ್ನ ತಂದೆಯ ಹೆಸರಿಗೆ ಉಳಿದ ಭಾಗವಾದ 8340 ಅಡಿ ಸ್ವತ್ತಿನ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ಉಳಿಸಿಕೊಂಡಿರುವ ಸ್ವತ್ತಿನ ವಿಸ್ತೀರ್ಣ ಪೂ.ಪಃ 105 ಉ.ದಃ 70 ಅಡಿ ಆಗಿರುತ್ತದೆ. ಸದರಿ ಸ್ವತ್ತಿನ ಪೂಃ ಓಣಿ, ಪಃ ಕೆರೆ, ಉಃ ಪಾರ್ಕ್, ದಃ ಖಾಲಿ ಜಾಗ ಇರುತ್ತದೆ.

1995 ರಲ್ಲಿ ನನ್ನ ತಂದೆ ಮತ್ತು ಅವರ ಮಕ್ಕಳಾದ ನಾವುಗಳು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ. ಸದರಿ ವಿಭಾಗಪತ್ರದಲ್ಲಿ ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ವಿಭಾಗ ಪತ್ರದಲ್ಲಿ ದಾವಾ ಆಸ್ತಿ ಬಗ್ಗೆ ನಮೂದು ಇರುವುದಿಲ್ಲ. ನಾನು ಪದವಿಧರನಾಗಿರುತ್ತೇನೆ. ವಿಭಾಗ ಪತ್ರದಲ್ಲಿ ನಮ್ಮಲ್ಲಿ ಈಗಾಗಲೇ ವಿಭಾಗವಾಗಿದ್ದು, ಇನ್ನು ವಿಭಾಗ ಮಾಡಿಕೊಳ್ಳಲು ಯಾವುದೇ ಚರಸ್ಥಿರ ಆಸ್ತಿ ಇಲ್ಲ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆ ಆ ರೀತಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಕೃಷ್ಣೇಗೌಡರು ತಮ್ಮ ಹೆಸರಿನಲ್ಲಿ ಉಳಿಸಿಕೊಂಡಿರುವ ಬಗ್ಗೆ ವಿಭಾಗ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ. ವಿಭಾಗವಾದ ನಂತರವೂ ಸಹ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಖಾತೆ ಕೃಷ್ಣೇಗೌಡ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

1972ರಲ್ಲಿ ವಿಭಾಗವಾಗುವಾಗಲೇ ಸಂಪೂರ್ಣ ದಾವಾ ಆಸ್ತಿಯನ್ನು ಲೋಕೇಶ್ವರ ರವರ ಹೆಸರಿಗೆ ಕೊಟ್ಟಿದ್ದು, ಅದರಲ್ಲಿ ನಮಗೆ ಯೂವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. (ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**